ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತ ಸದಸ್ಯರ ಹೆಸರು:	ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	1070 (969)
ಉತ್ತರಿಸಬೇಕಾದ ದಿನಾಂಕ:	15-03-2021.
ಉತ್ತರಿಸುವ ಸಚಿವರು:	ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಯಾದಗಿರಿ ಜಿಲ್ಲೆಯಲ್ಲಿ ಸರ್ಕಾರವು ಸರ್ಕಾರಿ ಮೆಡಿಕಲ್ ಕಾಲೇಜು ನಿರ್ಮಾಣದ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ; ಆಗಿದ್ದಲ್ಲಿ, ವಸ್ತುಸ್ಥಿತಿಯ ಮಾಹಿತಿ ನೀಡುವುದು;	ಯಾದಗಿರಿ ಜಿಲ್ಲೆಯಲ್ಲಿ ಸರ್ಕಾರವು ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸರ್ಕಾರಿ ಮೆಡಿಕಲ್ ಕಾಲೇಜಿನ ನಿರ್ಮಾಣದ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ. ಪ್ರಸ್ತುತ ಶೈಕ್ಷಣಿಕ ಬ್ಲಾಕ್, ಮಹಿಳಾ ಮತ್ತು ಪುರುಷರ, ಸಿಬ್ಬಂದಿ ಹಾಗೂ ಡಿ-ಗ್ರೂಪ್ ನೌಕರರ ವಸತಿ ಗೃಹಗಳ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.
ಆ)	ಸದರಿ ಮೆಡಿಕಲ್ ಕಾಲೇಜನ್ನು ಪ್ರಾರಂಭಿಸಲು ಎಷ್ಟು ಎಕರೆ ಭೂಮಿಯನ್ನು ನಿಗಧಿಪಡಿಸಿದೆ; (ವಿವರ ನೀಡುವುದು)	ಸದರಿ ಕಾಲೇಜನ್ನು ಪ್ರಾರಂಭಿಸಲು ಯಾದಗಿರಿ ಜಿಲ್ಲೆ ಮತ್ತು ತಾಲೂಕಿನ ಮುದ್ನಾಳ ಹೋಬಳಿ ಗ್ರಾಮದ ಸೀಮಾಂತರದ ಸರ್ವೆ ನಂ.28/1ರಲ್ಲಿ 13 ಎಕರೆ 18 ಗುಂಟೆ ಮತ್ತು ಸರ್ವೆ ನಂ.24ರಲ್ಲಿ 17 ಎಕರೆ 20 ಗುಂಟೆ ಒಟ್ಟು 30 ಎಕರೆ ಮತ್ತು 38 ಗುಂಟೆ ಭೂಮಿಯನ್ನು ನಿಗಧಿಪಡಿಸಿದೆ.
ಇ)	ಸರ್ಕಾರಿ ಮೆಡಿಕಲ್ ಕಾಲೇಜು ಸಾರ್ವಜನಿಕ ಸೇವೆಗೆ ಎಂದಿನಿಂದ ಲಭ್ಯವಾಗಲಿದೆ? (ವಿವರ ನೀಡುವುದು)	ಸರ್ಕಾರಿ ಮೆಡಿಕಲ್ ಕಾಲೇಜು 2021-22ನೇ ಸಾಲಿನಲ್ಲಿ ಸಾರ್ವಜನಿಕ ಸೇವೆಗೆ ಲಭ್ಯವಾಗಲಿದೆ.

ಸಂಖ್ಯೆ: ಎಂಇಡಿ 185 ಎಂಪಿಎಸ್ 2021

(ಡಾ.ಕೆ.ಸುಧಾಕರ್)
ವೈದ್ಯಕೀಯ ಶಿಕ್ಷಣ ಹಾಗೂ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಇಲಾಖಾ ಸಚಿವರು